# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ : 87(942)
ಮಾನ್ಯ ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸುವ ದಿನಾಂಕ : 24.08.2026

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಕೆಳಕಂಡಂತಿದೆ:<br><br>ಸರ್ಕಾರಿ ಪ್ರಾಥಮಿಕ ಶಾಲೆಗಳು - 41054<br>ಸರ್ಕಾರಿ ಪ್ರೌಢ ಶಾಲೆಗಳು – 5025<br><br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ) |
| ಆ) | ಸದರಿ ಶಾಲೆಗಳಲ್ಲಿ ಮಂಜೂರಾದ ಡಿ ಗ್ರೂಪ್ ನೌಕರರ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; | • ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಗ್ರೂಪ್ ಡಿ ನೌಕರರ ಹುದ್ದೆ ಮಂಜೂರಾಗಿರುವುದಿಲ್ಲ.<br>• ಸರ್ಕಾರಿ ಪ್ರೌಢ ಶಾಲೆಗಳಿಗೆ ಒಟ್ಟು 5788 ಗ್ರೂಪ್ ಡಿ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 2761 ಹುದ್ದೆಗಳಲ್ಲಿ ನೌಕರರು ಕಾರ್ಯ ನಿರ್ವಹಿಸುತ್ತಿರುತ್ತಾರೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಮಕ್ಕಳಿಂದ ಶಾಲೆಯ ಶೌಚಾಲಯ ಮತ್ತು ಶಾಲಾ ಆವರಣ ಸ್ವಚ್ಛಗೊಳಿಸುವ ಕೆಲಸ ಮಾಡಿಸಿದ ಕಾರಣ ಎಷ್ಟು ಶಿಕ್ಷಕರ ಮೇಲೆ ದೂರು ದಾಖಲಿಸಲಾಗಿದೆ; | • ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಶಿಸ್ತು ಪ್ರಾಧಿಕಾರಿಗಳಾಗಿದ್ದು, ಈ ಸಂಬಂಧ ಸ್ವೀಕೃತವಾಗುವ ದೂರುಗಳಿಗೆ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ಹಂತದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುತ್ತಿರುತ್ತದೆ.<br>• ಬೆಂಗಳೂರು ಆಯುಕ್ತಾಲಯದಲ್ಲಿ 03, ಬೆಳಗಾವಿ ಆಯುಕ್ತಾಲಯದಲ್ಲಿ 02, ಕಲಬುರಗಿ ಆಯುಕ್ತಾಲಯದಲ್ಲಿ ದೂರು ಸ್ವೀಕೃತವಾಗಿರುತ್ತದೆ. |
| ಈ) | ಹಲವು ಶಾಲೆಗಳಲ್ಲಿ ಡಿ ಗ್ರೂಪ್ ನೌಕರರು ಇಲ್ಲದ ಕಾರಣ ಕಸ ಗುಡಿಸಲು, ಶೌಚಾಲಯ ಆವರಣದ ಶಾಲಾ ನೈರ್ಮಲ್ಯ ಕಾಪಾಡುವ ಕೆಲಸವನ್ನು ಸ್ವಚ್ಛಗೊಳಿಸಲು ಮತ್ತು ನಿರ್ವಹಿಸುವವರು ಯಾರು; ಸದರಿ ಕೆಲಸಗಳನ್ನು ನಿರ್ವಹಿಸಲು ಪ್ರತಿ ಶಾಲೆಗೆ ಒಬ್ಬರಂತೆ ಡಿ ಗ್ರೂಪ್ ನೌಕರರನ್ನು ನೇಮಕ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; | 2026-27ನೇ ಸಾಲಿನ ತಾಲ್ಲೂಕು ವಲಯದಡಿ ಒದಗಿಸಲಾದ ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಶಾಲಾ-ಕಾಲೇಜುಗಳ ಮುಖ್ಯಸ್ಥರು ಎಸ್.ಡಿ.ಎಂ.ಸಿ./ಸಿಡಿಸಿ ಮೂಲಕ ಶಾಲಾ/ಕಾಲೇಜು ಹಂತದಲ್ಲಿಯೇ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸಲು ಅರೆಕಾಲಿಕ ಅವಧಿಗೆ ಸ್ವಸಹಾಯ ಸಂಘಗಳನ್ನು ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನಿಯಮಗಳನುಸಾರ ನೇಮಿಸಿಕೊಳ್ಳಲು ಕ್ರಮವಹಿಸುವಂತೆ ಆದೇಶಿಸಲಾಗಿದೆ. |

...2

| | | |
|---|---|---|
| ಉ) | ಶಾಲಾ ನಿರ್ವಹಣೆಗಾಗಿ ಮುಖ್ಯೋಪಾಧ್ಯಾಯರಿಗೆ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು; ಸದರಿ ಅನುದಾನವನ್ನು ಯಾವ ಉದ್ದೇಶಗಳಿಗಾಗಿ ಬಳಸಬೇಕಾಗುತ್ತದೆ; ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಾಗಿ ಸರ್ಕಾರ ಶಾಲೆಗಳಿಗೆ ನೀಡುತ್ತಿರುವ ವೆಚ್ಚವೆಷ್ಟು; | 2026-27ನೇ ಸಾಲಿನಲ್ಲಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ನಿರ್ವಹಣೆಗಾಗಿ Student Facial Attendance Monitoring System ನಿರಂತರ (Niranthara App) ದಲ್ಲಿ ಸರಾಸರಿ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಗೆ ಅನುಗುಣವಾಗಿ ಘಟಕ ವೆಚ್ಚವನ್ನು ನಿಗದಿಪಡಿಸಿ ತಾಲ್ಲೂಕು ಪಂಚಾಯತ್ ವಲಯದಡಿ, ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಮತ್ತು ಪಿಎಂ ಶ್ರೀ ಯೋಜನೆಯಡಿ ಈ ಕೆಳಕಂಡಂತೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿರುತ್ತದೆ. |

| ಕ್ರ.ಸಂ | ಯೋಜನೆ | 2026-27ನೇ ಸಾಲಿಗೆ ಒದಗಿಸಲಾದ ಶಾಲಾ-ಕಾಲೇಜು ವಾರ್ಷಿಕ ನಿರ್ವಹಣಾ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | ತಾಲ್ಲೂಕು ಪಂಚಾಯತ್ ವಲಯ | 22000.00 |
| 2. | ಸಮಗ್ರ ಶಿಕ್ಷಣ ಕರ್ನಾಟಕ | 10877.55 |
| 3. | ಪಿಎಂ ಶ್ರೀ ಯೋಜನೆ | 563.00 |
| **ಒಟ್ಟು** | | **33440.55** |

**ತಾಲ್ಲೂಕು ಪಂಚಾಯತ್ ವಲಯದ ಅನುದಾನ:**

- 2018 ರಿಂದ ಈವರೆವಿಗೆ ಉನ್ನತೀಕರಿಸಲಾಗಿರುವ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (305 KPS) ವಿದ್ಯಾರ್ಥಿಗಳ ಹಾಜರಾತಿಗನುಗುಣವಾಗಿ ಕನಿಷ್ಠ ರೂ.2.5 ಲಕ್ಷದಿಂದ ರೂ.20.00 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ.
- ಆದರ್ಶ ವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ಹಾಜರಾತಿಗನುಗುಣವಾಗಿ ಕನಿಷ್ಠ ರೂ.5.00 ಲಕ್ಷದಿಂದ ರೂ.8.00 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ.
- ಎಡಿಬಿ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (KPS) ವಿದ್ಯಾರ್ಥಿಗಳ ಹಾಜರಾತಿ ಗನುಗುಣವಾಗಿ ಕನಿಷ್ಠ ರೂ.25.00 ಸಾವಿರದಿಂದ ರೂ.16.00 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ.
- ಮೇಲ್ಕಂಡ ಶಾಲೆಗಳನ್ನು ಹೊರತುಪಡಿಸಿ ಇತರೆ ಶಾಲೆಗಳಿಗೆ ವಿದ್ಯಾರ್ಥಿಗಳ ಹಾಜರಾತಿಗನುಗುಣವಾಗಿ ಕನಿಷ್ಠ ರೂ.10.00 ಸಾವಿರದಿಂದ ರೂ.8.00 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ.

...3

**ಸಮಗ್ರ ಶಿಕ್ಷಣ ಕರ್ನಾಟಕದಡಿ ಅನುದಾನ:**

- ಕೆಪಿಎಸ್ ಶಾಲೆಗಳನ್ನು ಹೊರತುಪಡಿಸಿ ಇತರೆ ಶಾಲೆಗಳಿಗೆ ವಿದ್ಯಾರ್ಥಿಗಳ ದಾಖಲಾತಿಯನುಗುಣವಾಗಿ ಕನಿಷ್ಠ ರೂ.25.00 ಸಾವಿರದಿಂದ ರೂ.1.00 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ

**ಪಿಎಂ ಶ್ರೀ ಯೋಜನೆಯಡಿ ಅನುದಾನ:**

- ಪಿಎಂ ಶ್ರೀ ಕೆಪಿಎಸ್ ಶಾಲೆಗಳಿಗೆ ಒಟ್ಟು ವಿದ್ಯಾರ್ಥಿಗಳ ದಾಖಲಾತಿಯನುಗುಣವಾಗಿ ಕನಿಷ್ಠ ರೂ.45.00 ಸಾವಿರದಿಂದ ರೂ.1.50 ಲಕ್ಷದವರೆಗೆ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸಲಾಗಿದೆ.

**ಶಾಲಾ ನಿರ್ವಹಣಾ ಅನುದಾನದಲ್ಲಿ ಭರಿಸಲು ಅನುಮತಿ ನೀಡಲಾಗಿರುವ ವೆಚ್ಚಗಳು ಕೆಳಗಿನಂತಿವೆ:**

1. ಕಛೇರಿ ದಾಖಲೆ ಪುಸ್ತಕಗಳ ಖರೀದಿ (ದಾಖಲಾತಿ ಪುಸ್ತಕ, ಹಾಳೆಗಳು, ಹಾಜರಾತಿ ಪುಸ್ತಕ, ವರ್ಗಾವಣೆ ಪತ್ರ, ಸಂಕ ಪಟ್ಟಿ )
2. ದಿನಪತ್ರಿಕೆ ಖರೀದಿ
3. ತರಗತಿಗೆ ಅಗತ್ಯವಿರುವ ಸಾಮಗ್ರಿಗಳು (ಸೀಮೆಸುಣ್ಣ, ಡಸ್ಟರ್)
4. ಕಟ್ಟಡಗಳ ಸಣ್ಣ ಪ್ರಮಾಣದ ದುರಸ್ತಿ (ಬಾಗಿಲು, ಕಿಟಕಿ, ಶೌಚಾಲಯ, ಪೀಠೋಪಕರಣಗಳ ದುರಸ್ತಿ, ಎಲೆಕ್ಟ್ರಿಕ್ ಉಪಕರಣಗಳ ರೂ.5000.00 ಗೂ ಕಡಿಮೆ ಇರುವ ದುರಸ್ತಿ ವೆಚ್ಚಗಳು ಮಾತ್ರ)
5. ಶೌಚಾಲಯ ನಿರ್ವಹಣೆ -ಶೌಚಾಲಯಗಳಲ್ಲಿ ನಿರಂತರ ನೀರಿನ ವ್ಯವಸ್ಥೆ ಮತ್ತು ಪ್ರತಿ ದಿನ ಕನಿಷ್ಠ ಮೂರು ಬಾರಿ ಶೌಚಾಲಯ ಸ್ವಚ್ಛತೆಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
6. ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮತ್ತು ನಿರ್ವಹಣೆ
7. ಶಾಲೆಗಳಲ್ಲಿನ ಗಣಕಯಂತ್ರಗಳು ಹಾಗೂ ಇತರ ಡಿಜಿಟಲ್ ಉಪಕರಣಗಳ ನಿರ್ವಹಣೆ
8. ಇಂಟರ್ನೆಟ್ ಶುಲ್ಕವನ್ನು ಭರಿಸಲು
9. ಶಾಲಾ ಸ್ವಚ್ಛತಾ ವೆಚ್ಚ
10. ರಾಷ್ಟ್ರೀಯ ಹಬ್ಬಗಳ ಆಚರಣೆ
11. ಕೆ.ಪಿ.ಎಸ್. ಶಾಲೆಗಳಿಗೆ ಘಟಕ/ಸಂಯೋಜಿತ ಶಾಲೆಗಳಿಂದ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯಕ್ಕೆ ಅಗತ್ಯವಿರುವ ಡ್ರೈವರ್ ಗೌರವ ಸಂಭಾವನೆ, ಆಯಾ ಸಂಭಾವನೆ, ಇಂಧನ ಮತ್ತು ದುರಸ್ತಿ ವೆಚ್ಚಗಳನ್ನು ಭರಿಸತಕ್ಕದ್ದು. ಒಟ್ಟಾರೆ ಬಿಡುಗಡೆಯಾದ ನಿರ್ವಹಣಾ ಅನುದಾನದಲ್ಲಿ ಶೇಕಡ 35ರಷ್ಟು ಅನುದಾನವನ್ನು ಶಾಲಾ ಸಾರಿಗೆ ವ್ಯವಸ್ಥೆಯ ನಿರ್ವಹಣೆಗಾಗಿ

| | | |
|---|---|---|
| | | 12. ಸಮಗ್ರ ಶಿಕ್ಷಣ ಕರ್ನಾಟಕದಡಿ ಹೊರಗುತ್ತಿಗೆ ಆಧಾರದ ಮೇಲೆ ವಿದ್ಯಾರ್ಥಿ ದತ್ತಾಂಶ ನಿರ್ವಹಣಾ ಸಹಾಯಕರು (Student Data Management Assistant) ಮತ್ತು ಭದ್ರತಾ ಸಿಬ್ಬಂದಿಯನ್ನು ಒದಗಿಸಲಾಗುತ್ತಿರುವ 956 ಶಾಲೆಗಳನ್ನು ಹೊರತುಪಡಿಸಿ ಜೂನ್ ಮಾಹೆಯಿಂದ Student Facial Attendance Monitoring System ನಿರಂತರ (Niranthara App) ದಲ್ಲಿ ಸರಾಸರಿ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯು 500ಕ್ಕಿಂತ ಹೆಚ್ಚಾಗಿರುವ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ./ಸಿಡಿಸಿ ಮೂಲಕ ಶಾಲಾ/ಕಾಲೇಜು ಹಂತದಲ್ಲಿಯೇ ಶಾಲೆ/ಕಾಲೇಜು ಕಾರ್ಯನಿರ್ವಹಿಸುವ ವೇಳೆಯ ಅವಧಿಗೆ ಮಾತ್ರ ಅರೆಕಾಲಿಕ ವಿದ್ಯಾರ್ಥಿ ದತ್ತಾಂಶ ನಿರ್ವಹಣಾ ಸಹಾಯಕರು (Student Data Management Assistant) ಮತ್ತು ಭದ್ರತಾ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯಮಗಳನುಸಾರ ನೇಮಿಸಿಕೊಂಡು ಗೌರವ ಸಂಭಾವನೆ ಪಾವತಿಸಲು.<br><br>ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಾಗಿ ಶಾಲೆಗಳಿಗೆ ಪ್ರತ್ಯೇಕವಾಗಿ ಅನುದಾನ ನಿಗದಿಪಡಿಸಿರುವುದಿಲ್ಲ. ಮೇಲ್ಕಂಡಂತೆ ಒದಗಿಸಲಾದ ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಾಗಿ ತಗುಲುವ ವೆಚ್ಚವನ್ನು ನಿಯಮಾನುಸಾರ ಬಳಸಿಕೊಳ್ಳಬಹುದಾಗಿದೆ. |
| ಊ) | ಸರ್ಕಾರ ಶಾಲಾ ನಿರ್ವಹಣೆಗಾಗಿ ಸೂಕ್ತ ಅನುದಾನ ನೀಡದ ಕಾರಣ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸೂಕ್ತ ಪ್ರಮಾಣದ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಮೇಲ್ಕಂಡಂತೆ 2026-27ನೇ ಸಾಲಿಗೆ Student Facial Attendance Monitoring System ನಿರಂತರ (Niranthara App) ದಲ್ಲಿ ಸರಾಸರಿ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಗೆ ಅನುಗುಣವಾಗಿ ತಾಲ್ಲೂಕು ವಲಯದಡಿ ಒದಗಿಸಲಾದ ಶಾಲಾ ವಾರ್ಷಿಕ ನಿರ್ವಹಣಾ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿ ಆದೇಶಿಸಲಾಗಿದೆ. ತಾಲ್ಲೂಕು, ವಲಯ, ಸಮಗ್ರ ಶಿಕ್ಷಣ ಮತ್ತು ಪಿಎಂಶ್ರೀ ಯೋಜನೆಯಡಿ ವಾರ್ಷಿಕ ನಿರ್ವಹಣಾ ಅನುದಾನ ಒದಗಿಸುತ್ತಿರುವುದರಿಂದ ಶಾಲೆಗಳಿಗೆ ಅನುಮತಿಸಲಾದ ಚಟುವಟಿಕೆಗಳಿಗೆ ಅನುದಾನದ ಕೊರತೆ ಉಂಟಾಗುವುದಿಲ್ಲ. |

**ಸಂಖ್ಯೆ:ಇಪಿ 109 ಪಿಎಂಎ 2026**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

| Sl.No | District Name | LPS | HPS | PS | HS | Total |
|---|---|---|---|---|---|---|
| | **District wise Government Schools Count as per SATS data** | | | | | |
| 1 | BAGALKOT | 446 | 774 | 1220 | 204 | 1424 |
| 2 | BALLARI | 229 | 366 | 595 | 125 | 720 |
| 3 | BELAGAVI | 512 | 814 | 1326 | 153 | 1479 |
| 4 | BELAGAVI CHIKKODI | 688 | 993 | 1681 | 232 | 1913 |
| 5 | BENGALURU RURAL | 592 | 423 | 1015 | 64 | 1079 |
| 6 | BENGALURU U NORTH | 217 | 249 | 466 | 68 | 534 |
| 7 | BENGALURU U SOUTH | 393 | 437 | 830 | 96 | 926 |
| 8 | BIDAR | 493 | 710 | 1203 | 167 | 1370 |
| 9 | CHAMARAJANAGARA | 310 | 403 | 713 | 87 | 800 |
| 10 | CHIKKABALLAPURA | 848 | 512 | 1360 | 111 | 1471 |
| 11 | CHIKKAMANGALURU | 597 | 638 | 1235 | 116 | 1351 |
| 12 | CHITRADURGA | 774 | 825 | 1599 | 116 | 1715 |
| 13 | DAKSHINA KANNADA | 225 | 658 | 883 | 170 | 1053 |
| 14 | DAVANAGERE | 475 | 576 | 1051 | 135 | 1186 |
| 15 | DHARWAD | 213 | 511 | 724 | 121 | 845 |
| 16 | GADAG | 182 | 395 | 577 | 119 | 696 |
| 17 | HASSAN | 1145 | 951 | 2096 | 240 | 2336 |
| 18 | HAVERI | 447 | 671 | 1118 | 164 | 1282 |
| 19 | KALBURGI | 752 | 930 | 1682 | 303 | 1985 |
| 20 | KODAGU | 108 | 248 | 356 | 47 | 403 |
| 21 | KOLAR | 1122 | 603 | 1725 | 126 | 1851 |
| 22 | KOPPAL | 361 | 517 | 878 | 195 | 1073 |
| 23 | MANDYA | 664 | 793 | 1457 | 214 | 1671 |
| 24 | MYSURU | 889 | 926 | 1815 | 232 | 2047 |
| 25 | RAICHUR | 646 | 719 | 1365 | 235 | 1600 |
| 26 | RAMANAGARA | 671 | 437 | 1108 | 108 | 1216 |
| 27 | SHIVAMOGGA | 852 | 918 | 1770 | 164 | 1934 |
| 28 | TUMAKURU | 1169 | 736 | 1905 | 131 | 2036 |
| 29 | TUMAKURU MADHUGIRI | 682 | 519 | 1201 | 96 | 1297 |
| 30 | UDUPI | 192 | 356 | 548 | 106 | 654 |
| 31 | UTTARA KANNADA | 435 | 471 | 906 | 49 | 955 |
| 32 | UTTARA KANNADA SIRSI | 584 | 496 | 1080 | 77 | 1157 |
| 33 | VIJAYANAGARA | 385 | 538 | 923 | 125 | 1048 |
| 34 | VIJAYAPURA | 785 | 968 | 1753 | 185 | 1938 |
| 35 | YADAGIRI | 450 | 440 | 890 | 144 | 1034 |
| | **TOTAL** | 19533 | 21521 | **41054** | **5025** | 46079 |

DIRECTOR (Primary Education
O/o CPI, Bengaluru-01